3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.197/2020**

**CW- 1** **PW:3**

| | |
|---|---|
| ಸಾಕ್ಷಿಯ ಹೆಸರು | ಃ ಹನಮಂತ ಕಾಲಗಗ್ಗರಿ |
| ತಂದೆ /ಗಂಡನ ಹೆಸರು | ಃ ಕಲ್ಲಪ್ಪ |
| ವಯಸ್ಸು | ಃ 51 ವರ್ಷ |
| ಉದ್ಯೋಗ | ಃ ಶಾಖಾ ವ್ಯವಸ್ಥಾಪಕರು ಕೆನರಾ ಬ್ಯಾಂಕ್ ತುಮಕೂರ ಶಾಖೆ |
| ವಾಸಸ್ಥಳ | ಃ ತುಮಕೂರು ನಗರ. |

ದಿಃ **23.07.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಸನ್ 2014 ರಿಂದ 2017 ರ ಅವಧಿಯಲ್ಲಿ ನಾನು ಸಿಂಡಿಕೇಟ ಬ್ಯಾಂಕ್ ಶಾಖೆ ಸಾವಲಗಿಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ಆರೋಪಿ ನಮ್ಮ ಬ್ಯಾಂಕನ ಗ್ರಾಹಕ ಆಗಿದ್ದಾರೆ.

ದಿಃ 16.06.2016 ರಂದು ಹೆಸ್ಕಾಂ ಹುಬ್ಬಳ್ಳಿ ಕಚೇರಿಯಿಂದ ನನಗೆ ಒಂದು ಕನ್ಪರ್ಮೇಷನ್ ಸಲುವಾಗಿ ಪತ್ರ ಬಂದಿತು. ಹೆಸ್ಕಾಂ ಹುಬ್ಬಳ್ಳಿ ಕಚೇರಿಗೆ ಆರೋಪಿಯು ಗುತ್ತಿಗೆ ಕಾಮಗಾರಿ ಸಲುವಾಗಿ ಟೆಂಡರ್ ಸಲ್ಲಿಸಿದ್ದು ಇರುತ್ತದೆ. ಅದಕ್ಕೆ ನಮ್ಮ ಶಾಖೆಗೆ ಸೇರಿದ ಸಾಲ್ವನ್ಸಿ ಸರ್ಟಿಫಿಕೇಟ್ ಆರೋಪಿಯು ಹಚ್ಚಿದ್ದು ಅದರ ಧೃಡಿಕರಣದ ಸಲುವಾಗಿ ಹೆಸ್ಕಾಂ ಹುಬ್ಬಳ್ಳಿ ಕಚೇರಿಯವರು ನಮ್ಮ ಶಾಖೆಗೆ ಪತ್ರ ಕಳುಹಿಸಿದರು. ಆ ಸಾಲ್ವನ್ಸಿ ಸರ್ಟಿಫಿಕೇಟ್ ನ್ನು ನೋಡಲಾಗಿ ಅದು ಸುಳ್ಳು ದಾಖಲಾತಿ ಇದೆ ಅಂತಾ ಹೇಳಿ ಅದೇ ದಿವಸ ಪತ್ರ ಬರೆದೆ. ಸದರಿ ಸಾಲ್ವನ್ಸಿ ಸರ್ಟಿಫಿಕೇಟ್ ಬಗ್ಗೆ ನಮ್ಮ ಶಾಖೆಯಲ್ಲಿ ಇರುವ ರಜಿಸ್ಟರನ್ನು ಪರಿಶೀಲನೆ ಮಾಡಿದೆ ಅದರಲ್ಲಿ ಆರೋಪಿಗೆ ಸಾಲ್ವನ್ಸಿ ಸರ್ಟಿಫಿಕೇಟ್ ಬಗ್ಗೆ ನೊಂದಣಿ ಇರಲಿಲ್ಲ. ಆ ಸಾಲ್ವನ್ಸಿ ಸರ್ಟಿಫಿಕೇಟ್ ನೋಡಲಾಗಿ ಅದನ್ನು ದಿಃ 26.05.2016 ರಂದು ಕೊಟ್ಟ ಹಾಗೆ ಇದ್ದು ಅದರ ಮೇಲೆ ಹಿಂದನ ವ್ಯವಸ್ಥಾಪಕರ ಸಹಿ ಇತ್ತು ಆದರೆ ಆ ದಿನದಂದು ನಾನು ಸದರಿ ಶಾಖೆಗೆ ಶಾಖಾ ವ್ಯವಸ್ಥಾಪಕನಾಗಿದ್ದೆ. ನಕಲಿ

ಪ್ರಮಾಣಪತ್ರ ಆರೋಪಿಗೆ ಕೊಟ್ಟ ಬಗ್ಗೆ ನಾನು ಸಾವಳಗಿ ಪೊಲೀಸ್ ಠಾಣೆಯಲ್ಲಿ ದಿಃ 24.08.2016 ರಂದು ದೂರು ಕೊಟ್ಟೆ. ನಾನು ನೀಡಿರುವ ದೂರಿನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.4 ಎಂದು, ನನ್ನ ಸಹಿಯನ್ನು ನಿಪಿ.4 (ಎ) ಎಂದು ಗುರುತಿಸಲಾಯಿತು. ನಂತರ ಸಾವಳಗಿ ಪೊಲಿಸನವರು ಹಾಗೂ ನಾನು ದಿಃ 13.02.2017 ರಂದು ಹೆಸ್ಕಾಂ ಕಚೇರಿ ನವನಗರ ಹುಬ್ಬಳ್ಳಿಗೆ ಬಂದೆವು. ಆ ಹೆಸ್ಕಾಂ ಕಚೇರಿಯಲ್ಲಿ ನಾವು ಪಂಚನಾಮೆ ಮಾಡಿದೆವು. ಜಾಗೆಯನ್ನು ನಾನೇ ತೊರಿಸಿದೆ. ನಿಪಿ.2 ಮತ್ತು 3 ಪೊಟೊಗಳಲ್ಲಿ ನಾನು ಇದ್ದು ದಿಃ 13.02.2017 ರಂದು ತೆಗೆಯಲಾಗಿದೆ. ದಿಃ 07.05.2017 ರಂದು ನವನಗರ ಎಪಿಎಂಸಿ ಪೊಲಿಸ್ ಠಾಣೆ ಹುಬ್ಬಳ್ಳಿಗೆ ಹೋಗಿ ಅಲ್ಲಿ ದೂರು  ನೀಡಿದೆ. ಅಲ್ಲಿ ಫೇಕ್ ಸಾಲ್ವನ್ಸಿ ಸರ್ಟಿಫಿಕೇಟ್ ಬಗ್ಗೆ ಹೇಳಿಕೆ ನೀಡಿದೆ. ಹೆಸ್ಕಾಂ ನಿಂದ ಬಂದಿರುವ ಪತ್ರದ ನಿಜಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ಸಾಲ್ವನ್ಸಿ ಸರ್ಟಿಫಿಕೇಟ್ ನ ನಿಜಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ನನಗೆ ತೊರಿದಂತೆ ಸಾಲ್ವನ್ಸಿ ಪ್ರಮಾಣಪತ್ರವನ್ನು ನಾನು ನೀಡಿಲ್ಲ ಹಾಗೂ ಅದು ಸುಳ್ಳು ಪ್ರಮಾಣಪತ್ರ ಅಂತಾ ಹೆಸ್ಕಾಂ ಇಲಾಖೆಗೆ ಬರೆದ ಪತ್ರದ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.7 ಎಂದು, ನನ್ನ ಸಹಿಯನ್ನು ನಿಪಿ.7 (ಎ) ಎಂದು ಗುರುತಿಸಲಾಯಿತು.

**ಮಿಸ್ ಪಿ ಕೆ ಡಿ ವಕೀಲರು ಪಾಟಿಸವಾಲಿಗೆ ಸಮಯ ಕೋರಿದ್ದು ಯಾವದೇ ಸಕಾರಣ ಇರದೇ ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.197/2020**

**CW- 6** **PW:4**

| | |
|---|---|
| ಸಾಕ್ಷಿಯ ಹೆಸರು | ಃ ಸಂತೋಷ ರೆಡ್ಡಿ |
| ತಂದೆ /ಗಂಡನ ಹೆಸರು | ಃ ಬಸವರೆಡ್ಡಿ |
| ವಯಸ್ಸು | ಃ 44 ವರ್ಷ |
| ಉದ್ಯೋಗ | ಃ ಕಾರ್ಯನಿರ್ವಾಹಕ ಅಬಿಯಂತರರು ಹೆಸ್ಕಾಂ ಕಚೇರಿ ಹುಬ್ಬಳ್ಳಿ |
| ವಾಸಸ್ಥಳ | ಃ ತುಮಕೂರು ನಗರ. |

ದಿಃ **23.07.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ತೋರಿದ ದಾಖಲೆಯಂತೆ ನಾನು ಆರೋಪಿತ ಅಪ್ಲೋಡ ಮಾಡಿದ ದಾಖಲೆಗಳ ಜಪ್ತು ಪಂಚನಾಮೆಗೆ ಸಹಿ ಮಾಡಿದ್ದು ನನ್ನ ಸಹಿಯನ್ನು ನೋಡಿ ಗುರುತಿಸುತ್ತಿದ್ದು ಆ ಪಂಚನಾಮೆಯನ್ನು ನಿಪಿ.8 ಎಂದು, ನನ್ನ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ದಿಃ 09.03.2020 ರಂದು ಬೆಳಿಗ್ಗೆ 10.30 ರಿಂದ 11.30 ರ ಅವಧಿಯಲ್ಲಿ ನಿಪಿ.8 ಕ್ಕೆ ಸಹಿ ಮಾಡಿದ್ದೇನೆ. ಆರೋಪಿಯು ನಮ್ಮ ಹೆಸ್ಕಾಂ ಕಚೇರಿಯ ಈ ಪ್ರೊಕ್ಯೂರಮೆಂಟ್ ವೆಬ್ಸೈಟ್ ಗೆ ದಾಖಲಾತಿಗಳನ್ನು ಅಪ್ಲೋಡ ಮಾಡಿದ್ದು ಚಾಸಾಃ 8 ರವರು ಅವುಗಳನ್ನು ಡೌನಲೋಡ ಮಾಡಿ ತನಿಖಾಧಿಕಾರಿಗಳಿಗೆ ನೀಡಿದ್ದು ಆ ಸಮಯದಲ್ಲಿ ನಿಪಿ.8 ನ್ನು ತಯಾರಿಸಿದ್ದು ಅದಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ. ನನ್ನ ಜೊತೆ ಚಾಸಾಃ 7 ರವರು ಇದ್ದರು. ಒಟ್ಟು 13 ದಾಖಲೆಗಳನ್ನು ತನಿಖಾಧಿಕಾರಿಗಳು ಆ ದಿವಸ ಪಡೆದುಕೊಂಡರು. ಆ ದಿವಸ ಚಾಸಾಃ 8 ರವರು ತನಿಖಾಧಿಕಾರಿಗಳಿಗೆ ನೀಡಿದ ದಾಖಲಾತಿಗಳಾದ ಸಾಲ್ವನ್ಸಿ ಸರ್ಟಿಫಿಕೇಟ್ ನ್ನು ನಿಪಿ.9 ಎಂದು, ಆರೋಪಿಯ ಲೇಬರ್ ಲೈಸನ್ಸ ನ ನಿಜಪ್ರತಿಯನ್ನು ನಿಪಿ.10 ಎಂದು, ಆರೋಪಿಯ ಇಲೆಕ್ಟ್ರಿಕ್ ಅಂಗಡಿಯ ವಿಮೆಯ ನಿಜಪ್ರತಿಯನ್ನು ನಿಪಿ.11 ಎಂದು, ವರ್ಕ್ ಡನ್ ಪ್ರಮಾಣಪತ್ರದ ನಿಜಪ್ರತಿಯನ್ನು ನಿಪಿ.12 ಎಂದು, ಆರೋಪಿಯ ಇಲೆಕ್ಟ್ರಿಕ್ ಲೈಸನ್ಸನ ನಿಜಪ್ರತಿಯನ್ನು

ನಿಪಿ.13 ಎಂದು, ನೋ ಡಿವಿಯೇಷನ್ ಸರ್ಟಿಫಿಕೇಟ್ ಪ್ರತಿಯ ನಿಜಪ್ರತಿಯನ್ನು ನಿಪಿ.14 ಎಂದು, ಸ್ಟೇಟಸ್ ಆಫ್ ಆನ್ ಗೋಯಿಂಗ್ ವರ್ಕ್ಸ್ ಪ್ರತಿಯನ್ನು ನಿಪಿ.15 ಎಂದು, ಆರೋಪಿಯ ಪ್ಯಾನ್ ಕಾರ್ಡನ ನಿಜಪ್ರತಿಯನ್ನು ನಿಪಿ.16 ಎಂದು, ಆರೋಪಿಯ ಫರ್ಮ್ ವಾಣಿಜ್ಯ ತೆರಿಗೆ ಇಲಾಖೆಗೆ ನೊಂದಣಿಯಾದ ಬಗ್ಗೆ ಪ್ರಮಾಣಪತ್ರದ ನಿಜಪ್ರತಿಯನ್ನು ನಿಪಿ.17 ಎಂದು, ವ್ಯಾಟ್ ಪ್ರಮಾಣಪತ್ರದ ನಿಜಪ್ರತಿಯನ್ನು ನಿಪಿ.18 ಎಂದು, ಆರೋಪಿ ನೀಡಿದ ಡಿಕ್ಲೇರೇಷನ್ ನ ನಿಜಪ್ರತಿಯನ್ನು ನಿಪಿ.19 ಎಂದು, ವರ್ಕ್ ಡನ್ ಸರ್ಟಿಫಿಕೇಟ್ ನ ನಿಜಪ್ರತಿಯನ್ನು ನಿಪಿ.20 ಎಂದು, ಚಾರ್ಟರ್ಡ್ ಅಕೌಂಟಂಟ್ ಇವರು ಆರೋಪಿಯ ವ್ಯವಹಾರದ ಟರ್ನ್ ಓವರ್ ಪ್ರಮಾಣಪತ್ರ ಹಾಗೂ ಬ್ಯಾಲನ್ಸ ಶೀಟಗಳ ನಿಜಪ್ರತಿಗಳನ್ನು ಒಟ್ಟಾರೆಯಾಗಿ ನಿಪಿ.21 ಎಂದು ಗುರುತಿಸಲಾಯಿತು. ಆರೋಪಿ ಟೆಂಡರ್ ಕೆಪ್ಯಾಸಿಟಿಯ ಅನೆಕ್ಸರ್ ಬಿ ಎರಡು ಪುಟದಲ್ಲಿರುವ ಪ್ರಮಾಣಪತ್ರದ ನಿಜಪ್ರತಿಯನ್ನು ನಿಪಿ.22 ಎಂದು ಗುರುತಿಸಲಾಯಿತು.

**ಮಿಸ್ ಪಿ ಕೆ ಡಿ ವಕೀಲರು ಪಾಟಿಸವಾಲಿಗೆ ಸಮಯ ಕೋರಿದ್ದು ಯಾವದೇ ಸಕಾರಣ ಇರದೇ ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.